ಇ) ಹಾಗಿಲ್ಲದಿದ್ದರೆ ಇನ್ನು ಮುಂದೆಯಾದರೂ ಯಾವ ರೀತಿಯ ಕ್ರಮಕ್ಕೆಗೊಳ್ಳುವುದು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :—

ಅ) ಚಾಮರಾಜ ಕ್ಷೇತದಲ್ಲಿ ೨೦ ಪ್ರಾಥಮಿಕ ಶಾಲೆಗಳಿಗೆ ಮೂಲಭೂತ ಸೌಕರ್ಯದ ಅಗತ್ಯತೆ ಇದೆ.

ಆ) ಕುಕ್ಕರಹಳ್ಳಿ ಮತ್ತು ವಸಂತನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಈ ಶಾಲೆ ಕಟ್ಟಡಗಳ ದುರಸ್ಥಿ ಕಾಮಗಾರಿಕೆ ಕ್ರಮಕ್ಕೆಗೊಂಡಿದೆ. ಸರ್ಕಾರಿ ಪ್ರೌಢಶಾಲೆ, ಮೇಜರ್ ಬ್ಲಾಕ್ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕುಕ್ಕರ ಹಳ್ಳಿ ಇಲ್ಲಿಗೆ ಪೀಠೋಪಕರಣ ಸರಬರಾಜು ಮಾಡಿ ಕುಡಿಯುವ ನೀರು ಹಾಗೂ ಶೌಚಾಲಯ ಕಲ್ಪಿಸಲಾಗಿದೆ.

ಇ) ಹಂತ ಹಂತವಾಗಿ ಆರ್ಥಿಕ ಸೌಲಭ್ಯ ಆದರಿಸಿ ಈ ಸಮಸ್ಯೆ ಬಗೆಹರಿಸಲು ಕ್ರಮಕ್ಕೆಗೊಳ್ಳಲಾಗುವುದು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ತರಗತಿಗಳ ಶುಲ್ಕ ಹೆಚ್ಚಳ

2610 (3147) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ತರಗತಿಗಳ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಶುಲ್ಕವನ್ನು ಹೆಚ್ಚಿಸಲಾಗಿದೆಯೆ;

ಆ) ಹಾಗಿದ್ದಲ್ಲಿ, ಈ ಹಿಂದೆ ಇದ್ದ ಶುಲ್ಕದ ವಿವರವೇನು ಈಗ ಹೆಚ್ಚಿಸಿರುವ ಶುಲ್ಕದ ವಿವರಗಳೇನು;

ಇ) ಹೀಗೆ ಅವೈಜ್ಞಾನಿಕವಾಗಿ ಶುಲ್ಕ ಹೆಚ್ಚಿಸಿರುವುದರಿಂದ ವಿದ್ಯಾರ್ಥಿಗಳು ಹಾಗೂ ಪೋಷಕರು ಕಂಗಾಲಾಗಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಈ ರೀತಿಯಾಗಿ ಹೆಚ್ಚಿಸಿರುವ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರದ ತೀರ್ಮಾನವೇನು?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಹೌದು.

ಆ) ಒಂದನೇ ಅನುಬಂಧದಲ್ಲಿದೆ.

ಇ) ಇಲ್ಲ.

ಈ) ವಿಶ್ವವಿದ್ಯಾಲಯಗಳು ತಮ್ಮದೇ ಆದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಲು ಶುಲ್ಕ ಪರಿಷ್ಕರಣೆ ಅನಿವಾರ್ಯವಾಗಿದೆ. ಆದ್ದರಿಂದ ಹೆಚ್ಚಿಸಿರುವ ಶುಲ್ಕವನ್ನು ಕಡಿಮೆ ಮಾಡಲು ಆಸ್ಪದವಿಲ್ಲ.

ಅನುಬಂಧ - 1 Annexure - 1
ಪದವಿ ಕೋರ್ಸುಗಳಿಗೆ Degree Courses

ವಿವರ Details	2000-2001ದಲ್ಲಿದಂತೆ Fees in the year 2001-2002	2001-2002ನೇ ಸಾಲಿಗೆ ನಿಗದಿಪಡಿಸಿರುವುದು Fees fixed for the year 2000-2001
(1) ಪ್ರವೇಶ ಶುಲ್ಕ Admission fee	30-00	50-00
(2) ನೊಂದಣಿ ಶುಲ್ಕ Registration fee	182-00	300-00
(3) ಕ್ರೀಡಾಭಿವೃದ್ಧಿ ಶುಲ್ಕ Sports fee	44-00	55-00
(4) ಸಾಂಸ್ಕೃತಿಕ ಚಟುವಟಿಕೆಗಾಗಿ ಶುಲ್ಕ Cultural Activities fee	12-00	20-00
(5) ಯು ಇ ಐ ಜಿ ಬಿ U E I G B	24-00	30-00
(6) ವಿದ್ಯಾರ್ಥಿಗಳ ಸಹಾಯ ನಿಧಿ Students help fund	20-00	25-00
(7) ವಿಶ್ವವಿದ್ಯಾನಿಲಯಗಳ ಶುಲ್ಕ University fee	--	50-00
(8) ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ Students Welfare	12-00	20-00
(9) ಮೂಲಭೂತ ಸೌಕರ್ಯಕ್ಕೆ For Infrastructural facilities	55-00	80-00
(10) ಸುವರ್ಣ ಮಹೋತ್ಸವ ನಿಧಿಗೆ Golden Jubilee Celebration fund	--	15-00

ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ P.G. Courses

2000-2001ದಲ್ಲಿದಂತೆ Fees in the year year 2000-2001	2001-2002ನೇ ಸಾಲಿಗೆ ನಿಗದಿಪಡಿಸಿರುವುದು Fees fixed for the year 2001-2002
30-00	50-00
182-00	300-00
44-00	50-00
12-00	20-00
24.30	30-00
20-00	25-00
--	41-00
12-00	20-00
165.00	80.00
--	15-00